ಅದೊಂದು ವಿಶಾಲ ನದಿ. ನದಿಯನ್ನು ದಾಟಲು ಇಬ್ಬರು ಕುಡುಕರು ದೋಣಿಯಲ್ಲಿ ಕೂತರು. ನದಿಯ ಮಧ್ಯ ಭಾಗಕ್ಕೆ ಬಂದಾಗ ಅಲೆಗಳ ರಭಸಕ್ಕೆ ದೋಣಿಯು ಅಲುಗಾಡಲಾರಂಭಿಸಿತು. ಆಗ ಕುಡುಕನೊಬ್ಬ ಇನ್ನೊಬ್ಬ ಕುಡುಕನಿಗೆ ಹೀಗೆ ಹೇಳಿದ.

**ಕುಡುಕ:** ದೋಣಿ ಅಲುಗಾಡ್ತಿದೆ.

**ಕುಡುಕ1:** ನೀನು ಕುಡಿದಿದ್ದು ಜಾಸ್ತಿಯಾಯ್ತು. ದೋಣಿ ಈ ಅಲೆಗಳಿಗೆ ಅಲುಗಾಡಲ್ಲ.

**ಕುಡುಕ:** ನೀನೇನು ಕಡಿಮೆ ಕುಡಿದಿದ್ದೀಯ? ದೋಣಿ ಖಂಡಿತ ಅಲುಗಾಡ್ತಿದೆ. ದೋಣಿ ಮುಳುಗಿ ಹೋದ್ರೆ?

**ಕುಡುಕ1:** ಹೋಗ್ಲಿ ಬಿಡೋ, ಈ ಮೂರ್ಖ ಅಂಬಿಗ ನಮ್ಮ ಹತ್ರ ಹೆಚ್ಚು ಹಣ ತಗೊಂಡಿದ್ದಾನೆ. ದೇವರು ಇವನಿಗೆ ಬುದ್ಧಿ ಕಲಿಸಿದಂತಾಗುತ್ತೆ!

**ಅಂಬಿಗ:** ಅಲುಗಾಡ್ತಾ ಇರೋದು ಅಲೆಗಳಿಂದಲ್ಲ ಕುಡಿದ ಮತ್ತಿನಲ್ಲಿರುವ ನಿಮ್ಮಿಂದ!

***

ಆಧುನಿಕ ಅಲಂಕಾರದೊಂದಿಗೆ ಕಂಗೊಳಿಸುತ್ತಿದ್ದ ಮಹಿಳೆಯೊಬ್ಬಳು ತನ್ನ ವಯಸ್ಸಿನ ಬಗ್ಗೆ ಒಂದೊಂದು ಸಲ ಒಂದೊಂದು ವಯಸ್ಸನ್ನು ಹೇಳುತ್ತಿದ್ದಳು. ಅವಳು ಒಮ್ಮೆ ತನ್ನ ಮಗಳೊಂದಿಗೆ ಒಂದು ಪಾರ್ಟಿಗೆ ಹೋಗಬೇಕಾಯಿತು. ಪಾರ್ಟಿಯಲ್ಲಿ ಐವರಿಗೆ ಐದು ರೀತಿಯಲ್ಲಿ ಅಂದರೆ 20, 23, 24, 25, ಮತ್ತು 26 ಹೀಗೆ ತನ್ನ ವಯಸ್ಸನ್ನು ಹೇಳಿದಳು. ಅವಳ ಪಕ್ಕದಲ್ಲೇ ಇದ್ದ ಮಗಳಿಗೆ ಆಶ್ಚರ್ಯವಾಯಿತು. ಅವಳು ತಾಯಿಯ ಕೈಯನ್ನು ಹಿಡಿದುಕೊಂಡು ಬದಿಗೆ ಹೋಗಿ ತಾಯಿಯ ಕಿವಿಯಲ್ಲಿ ಉಸುರಿದಳು —'ಓಹ್ ಮಮ್ಮಿ! ನಿನ್ನ ವಯಸ್ಸಿನ ಬಗ್ಗೆ ಹೇಳುವಾಗ, ನನಗೂ ನಿನಗೂ ಒಂಬತ್ತು ತಿಂಗಳ ವ್ಯತ್ಯಾಸ ಇರುವಂತೆ ಹೇಳುವುದನ್ನು ಮರೆಯಬೇಡ'!

***

ರೋಗಿಯೊಬ್ಬ ವೈದ್ಯರ ಬಳಿಗೆ ಚೆಕ್‌ಅಪ್‌ಗೆ ಹೋದ. ಅವನನ್ನು ಪರೀಕ್ಷಿಸಿದ ವೈದ್ಯರು ಹೀಗೆ ಕೇಳಿದರು.

**ವೈದ್ಯ:** ನೀವು ದಿನಕ್ಕೆಷ್ಟು ಬೀಡಿ ಸೇದ್ತೀರಿ?

**ರೋಗಿ:** ಹದಿನೈದು.

**ವೈದ್ಯ:** ತುಂಬ ಜಾಸ್ತಿಯಾಯ್ತು. ನೀವು ಊಟ ಮಾಡಿದ ನಂತರ ಒಂದ್ಸಲ ಮಾತ್ರ ಬೀಡಿ ಸೇದಿ.

**ರೋಗಿ:** ನಾಲ್ಕು ತಿಂಗಳ ನಂತರ ರೋಗಿ ಮತ್ತೆ ವೈದ್ಯರ ಬಳಿಗೆ ಬಂದ. ಈಗ ಅವನ ಆರೋಗ್ಯ ತುಂಬ ಸುಧಾರಿಸಿತ್ತು. ಅಲ್ಲದೆ ಮೊದಲಿಗಿಂತ ದಷ್ಟಪುಷ್ಟನಾಗಿದ್ದ.

**ವೈದ್ಯ:** ನೋಡಿದ್ರಾ, ನನ್ನ ಸಲಹೆಯನ್ನು ಪಾಲಿಸಿದ್ದರಿಂದಾಗಿಯೇ ಈಗ ನಿನ್ನ ಆರೋಗ್ಯ ತುಂಬ ಸುಧಾರಿಸಿದೆ.

**ರೋಗಿ:** ನೀವು ಹೇಳೋದು ಸರಿ, ಆದ್ರೆ ದಿನಕ್ಕೆ ಹದಿನೈದು ಸಲ ಊಟ ಮಾಡೋದು ಸುಲಭದ ಕೆಲ್ಸವಲ್ಲ, ಡಾಕ್ಟರ್!

***




ರಸ್ತೆ ನಿರ್ಮಾಣದ ಕಾಮಗಾರಿ ಮಾತ್ರ ಯಾವಾಗಲೂ ಕೆಳದರ್ಜೆ ಆಗಿರುತ್ತೆ., ಅಲ್ವೇನ್ರೀ......!?

ಒಬ್ಬ ಪ್ರಸಿದ್ಧ ಪೈಲ್ವಾನ್ ರಾತ್ರಿ ವೇಳೆಯಲ್ಲಿ ತನ್ನ ಮನೆಗೆ ಹೋಗುತ್ತಿದ್ದ. ಮಾರ್ಗದಲ್ಲಿ ಕಳ್ಳನೊಬ್ಬ ಅವನನ್ನು ಅಡ್ಡಗಟ್ಟಿ, ಚಾಕು ತೋರಿಸಿ, 'ನಿನ್ನಲ್ಲಿರುವ ಹಣವನ್ನೆಲ್ಲ ಕೊಟ್ಬಿಡು' ಎಂದು ಹೆದರಿಸಿದ. ಆ ಪೈಲ್ವಾನ್ ಹಿಂದು ಮುಂದು ನೋಡದೆ ತನ್ನ ಪರ್ಸನ್ನು ಅವನಿಗೆ ಕೊಟ್ಟ. ಪರ್ಸ್‌ನಲ್ಲಿ ಕೇವಲ ಹದಿನೈದು ರೂಪಾಯಿಗಳು ಮಾತ್ರವಿತ್ತು. ಸರಿ, ಪೈಲ್ವಾನ್ ಮನೆಗೆ ಬಂದು ನಡೆದ ಘಟನೆಯನ್ನು ತನ್ನ ಹೆಂಡತಿಗೆ ತಿಳಿಸಿದ. ಅವನ ಹೆಂಡತಿಗೆ ಆಶ್ಚರ್ಯವಾಯಿತು. ಅವಳು ಕೂಗಾಡಿ, 'ನೀವೇಕೆ ಅವನನ್ನು ನೆಲಕ್ಕೆ ಕೆಡವಿ ಥಳಿಸಲಿಲ್ಲ? ನೀವು ಪೈಲ್ವಾನ್ ಎಂಬುದನ್ನು ಮರೆತ್ರಾ? ನೀವು ಅವನನ್ನು ಥಳಿಸದಿದ್ದದ್ದು, ನಿಮ್ಮ ಪೈಲ್ವಾನ್‌ಗಿರಿಗೆ ನಾಚಿಕೆಗೇಡಿನ ಸಂಗತಿ' ಎಂದು ಪತಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದಳು.

ಅದಕ್ಕೆ ಉತ್ತರಿಸಿದ ಪೈಲ್ವಾನ್, ನೋಡೆ, ಇದರಲ್ಲಿ ನಾಚಿಕೆ ಏನ್ ಬಂತು? ಒಂದೊಂದು ರೂಪಾಯಿಗೂ ನೀನು ನನ್ನೊಂದಿಗೆ ಕಿತ್ತಾಡುತ್ತೀಯ. ಹೀಗಿರುವಾಗ ಕೇವಲ ಹದಿನೈದು ರೂಪಾಯಿಗೋಸ್ಕರ ಆ ಕಳ್ಳನೊಂದಿಗೆ ನಾನು ಹೋರಾಡಿದ್ದರೆ, ಆಗ ಅದು ನಿಜಕ್ಕೂ ನಾಚಿಕೆಗೇಡಿನ ಸಂಗತಿಯಾಗುತ್ತಿತ್ತು!

ಯುವತಿಯೊಬ್ಬಳು ಜ್ಯೋತಿಷಿಯ ಬಳಿಗೆ ಬಂದು, 'ನನ್ನ ವಿವಾಹದ ಬಗ್ಗೆ ಹೇಳುತ್ತೀರ' ಎಂದು ಕೇಳಿದಳು. ಜ್ಯೋತಿಷಿ ಅವಳು ತಂದಿದ್ದ ಜಾತಕವನ್ನು ನೋಡಿ ಹಲವು ರೀತಿಯ ಲೆಕ್ಕಚಾರ ಹಾಕುತ್ತಾ ನೋಡಿ, 'ನಿಮ್ಮ ವಿವಾಹ ನಿಮ್ಮ ಕನಸಿನ ರಾಜಕುಮಾರನೊಂದಿಗೆ ಸದ್ಯದಲ್ಲೇ ನೆರವೇರುತ್ತದೆ' ಎಂದು ಹೇಳಿದರು. ಖುಷಿಗೊಂಡ ಯುವತಿ, 'ಥ್ಯಾಂಕ್ಸ್! ಆದ್ರೆ ಈಗಿರುವ ನನ್ನ ಗಂಡನಿಂದ ಮುಕ್ತಿ ಪಡೆಯುವ ಬಗ್ಗೆ ಸೂಕ್ತ ಸಲಹೆ ಮತ್ತು ಉಪಾಯವನ್ನು ಹೇಳಿ' ಎಂದಳು!

***

ಒಬ್ಬಾತ ಹೆಣ್ಣು ಕತ್ತೆಯನ್ನು ಸಾಕಿದ್ದ. ಅದು ಒದೆಯುವುದರಲ್ಲಿ ಪಳಗಿತ್ತು! ಒಂದು ದಿನ ಆ ಕತ್ತೆ ಅವನ ತಾಯಿಗೆ ಒದ್ದಿದ್ದರಿಂದ ಆ ಆಕೆ ಸತ್ತು ಹೋದಳು. ಮರುದಿನ ಅವನ ಅಕ್ಕಪಕ್ಕದ ಹೆಂಗಸರು ಅವನ ಮನೆಯೆದುರು ಸೇರಿದರು. ಹೆಂಗಸರ ಗುಂಪನ್ನು ನೋಡಿ ಕತ್ತೆ ಮಾಲೀಕನಿಗೆ ತುಂಬ ಖುಷಿಯಾಯಿತು. ಅಲ್ಲದೇ ಅವನು, 'ನೋಡಿದ್ಯಾ, ನನ್ನಮ್ಮ ಎಷ್ಟು ಹೆಸರುವಾಸಿಯಾಗಿದ್ದಳು. ಆದರೆ ನೀನು ಮಾತ್ರ ಅವಳನ್ನು ಬೈಯ್ತಿದ್ದೆ, ಇವರೆಲ್ಲಾ ನನ್ನಮ್ಮನ ನಿಧನಕ್ಕೆ ಸಂತಾಪ ಸೂಚಿಸಲು ಬಂದಿದ್ದಾರೆ' ಎಂದು ತನ್ನ ಹೆಂಡತಿಗೆ ಹೆಮ್ಮೆಯಿಂದ ಹೇಳಿದ. ಅದಕ್ಕೆ ಪ್ರತಿಕ್ರಿಯಿಸಿದ ಹೆಂಡತಿ, 'ಇವರೆಲ್ಲ ನಿಮ್ಮ ಅಮ್ಮ ಸತ್ತಿದ್ದಕ್ಕೆ ಸಮಾಧಾನ ಹೇಳಲು ಬಂದಿಲ್ಲ. ಇವರಿಗೆ ನಮ್ಮ ಕತ್ತೆ ಬೇಕಂತೆ. ಅದಕ್ಕೆ ಇಲ್ಲಿಗೆ ಬಂದಿದ್ದಾರೆ ಎಂದಳು!

***

ಒಬ್ಬ ಶ್ರೀಮಂತ ತನ್ನೆಲ್ಲ ಆಸ್ತಿಯನ್ನು ಕಳೆದುಕೊಂಡು ದಿವಾಳಿಯಾದ. ಅವನು ಬದುಕಿದ್ದಾಗ ಬರೆದಿಟ್ಟಿದ್ದ ಉಯಿಲನ್ನು ಸತ್ತ ನಂತರ ತೆರೆದು ನೋಡಿದಾಗ ಅದರಲ್ಲಿ ಹೀಗೆ ಬರೆಯಲಾಗಿತ್ತು; ನನ್ನ ಕೊನೆಯಾಸೆ ಎಂದರೆ ನನ್ನ ಚಟ್ಟವನ್ನು ನನ್ನ ನಾಲ್ವರು ಸಾಲಗಾರರು ಹೊರಬೇಕು. ಏಕೆಂದರೆ ಅವರು ನನ್ನನ್ನು ಇಷ್ಟು ದೂರ ತಂದು ನಾನು ದಿವಾಳಿಯಾಗಲು ಕಾರಣರಾಗಿದ್ದಾರೆ. ಅಂತಿಮ ಸಮಯದಲ್ಲೂ ಅವರೇ ನನ್ನ ಶವವನ್ನು ಸ್ಮಶಾನದವರೆಗೆ ಹೊತ್ತುಕೊಂಡು ಹೋಗಲಿ!

***

ಸಿದ್ದೇಗೌಡರು ಮೊದಲ ಬಾರಿಗೆ ವಿದೇಶ ಪ್ರಯಾಣಕ್ಕೆ ಹೊರಟಿದ್ದರು. ಆಗ ಪಾಸ್‌ಪೋರ್ಟ್ ಪರಿಶೀಲನಾ ಅಧಿಕಾರಿ ಹಾಗೂ ಸಿದ್ದೇಗೌಡರ ಸಂಭಾಷಣೆ ಹೀಗಿತ್ತು.

**ಅಧಿಕಾರಿ:** ನಿಮ್ಮ ಹೆಸರೇನು?

**ಸಿದ್ದೇಗೌಡ:** ಸಿದ್ದೇಗೌಡ.

**ಅಧಿಕಾರಿ:** ಪಾಸ್‌ಪೋರ್ಟ್‌ನಲ್ಲಿ ಹೆಸರು ಸರಿಯಿದೆ, ಆದರೆ ಇಲ್ಲಿರುವ ಫೋಟೋದಲ್ಲಿ ನಿಮಗೆ ತಲೆಕೂದಲುಗಳಿಲ್ಲ. ಆದ್ರೆ ನಿಮ್ಮ ತಲೆ ಈಗ ತುಂಬ ಕೂದಲಿದೆಯಲ್ಲ. ಇದು ಹೇಗೆ ಸಾಧ್ಯ? ಬಹುಶಃ ಇದು ನಕಲಿ ಪಾಸ್‌ಪೋರ್ಟ್ ಹ?

**ಸಿದ್ದೇಗೌಡ:** (ತಲೆಯ ಮೇಲಿದ್ದ ವಿಗ್ ತೆಗೆದು) ಸರ್, ಪಾಸ್‌ಪೋರ್ಟ್ ಒರಿಜಿನಲ್ಲೇ. ಆದ್ರೆ ನನ್ನ ತಲೆಯ ಮೇಲಿರುವ ಕೂದಲುಗಳು ನಕಲಿ!

ಸಂಗ್ರಹ (ಹಿಂದಿಯಿಂದ):
ಡಿ.ಎನ್. ಶ್ರೀನಾಥ್, ಶಿವಮೊಗ್ಗ